

ಸರೋವರದ ತಟದ ಮೇಲೆ ರೂಪುಗೊಂಡ ಸುಂದರ ಹಾಲ್‌ಸ್ಟಾಟ್ ನಗರ

'ಸಾಲ್ಟ್ ಮೌಂಟೇನ್' ವಿಹಾರಕ್ಕೆ ಪ್ರವಾಸಿಗರನ್ನು ಕರೆದೊಯ್ಯುವ ವ್ಯವಸ್ಥೆ



ಚಟುವಟಿಕೆಗಳಿವು. ಇರುವ ಒಂದೇ ವಾಹನರಸ್ತೆಯಲ್ಲಿ ಟೌನಿನ ಒಳಹೊಕ್ಕಾಯ್ತು.

ಇಲ್ಲಿ ಎಲ್ಲಿ ಬೇಕೆಂದರಲ್ಲಿ ಕಾರು ನಿಲ್ಲಿಸಲು ಅನುಮತಿಯಿಲ್ಲ, ಜಾಗವೂ ಇಲ್ಲ. ಹೋಗುವಾಗಲೇ ಬಲಕ್ಕೆ ಕಾಣುವ ಎರಡೇ ಎರಡು 'ಪಾರ್ಕಿಂಗ್ ಪ್ಲಾಟ್ಸ್'ಗಳಲ್ಲಿ ಜಾಗವಿದೆಯೇ ಎಂದು 'ಪಾರ್ಕ್‌ಪೋಲ್ ಬೋರ್ಡ್' ತೋರಿಸುತ್ತಿರುತ್ತದೆ. ಇದ್ದ ಒಂದೆರಡು ಜಾಗ ತಕ್ಷಣವೇ ಕಾಯುತ್ತಿದ್ದವರ ಪಾಲಾಗಿ, 'ಇಲ್ಲ' ಎಂದೂ ತೋರಿಸುತ್ತೆ. ಹಾಗಾಗಿ ಸಿಗದಿದ್ದರೆ ಮುಂದೆ ಸಾಗಿ ಎದುರಾಗುವ ಉದ್ದದ ಸುರಂಗದಲ್ಲಿ ಹೋಗಿ, ಯೂ ಟರ್ನ್ ತೆಗೆದುಕೊಂಡು ಮತ್ತೊಂದು ಸುರಂಗದಿಂದ ಹಳ್ಳಿಯೊಳಗೆ ಪ್ರವೇಶಿಸಬೇಕು. ಗಮನವೆಲ್ಲ ಬೋರ್ಡ್ ಮೇಲೇ ಇರಬೇಕು. 'ಇದೆ–ಇಲ್ಲ' ಎನ್ನುವ ಕಣ್ಣಾಮುಚ್ಚಾಲೆಯಲ್ಲಿ ಮೂರು ಬಾರಿ ಇದೇ ರೀತಿ ಟನಲ್‌ನಲ್ಲಿ ಸುತ್ತುವಾಗ, 'ಈಗಲೂ ಸಿಗದಿದ್ರೆ ಹಳ್ಳಿಯೊಳಗೆ ಇಳಿಯಲು ಸಾಧ್ಯವಿಲ್ಲ, ನೋಡಲೂ ಸಾಧ್ಯವಿಲ್ಲ' ಎಂದ ಅಳಿಯನ ಮಾತಿಗೆ ನನಗಂತೂ ಅಳುವೇ ನುಗ್ಗಿತು.

ಸ್ವರ್ಗದ್ವಾರದಲ್ಲಿ ನಿಂತು ಸ್ವರ್ಗದೊಳಗೆ ಪ್ರವೇಶಿಸುವಂತಿಲ್ಲ ಎಂದರೆ? ನಮ್ಮ ಪುಣ್ಯ, ಮೂರನೇ ಬಾರಿಗೆ ಮ್ಯೂಸಿಕಲ್ ಚೇರ್ ಆಟದ ಕುರ್ಚಿ ಹಿಡಿದಂತೆ ಸಿಕ್ಕೇಬಿಟ್ಟಾಗ, ಕುಣಿಯುವುದೊಂದೇ ಬಾಕಿ.

ಈ ಹಳ್ಳಿಯಲ್ಲಿರುವುದು ಎರಡೇ ರಸ್ತೆ. ವಾಹನ ಬರಲು ಒಂದು. ಇದಕ್ಕೆ ಸಮಾನಾಂತರವಾಗಿ ಇರುವ ಇನ್ನೊಂದೇ ಒಂದು ಉದ್ದ ರಸ್ತೆಯೇ ಹಳ್ಳಿಯ ಮುಖ್ಯರಸ್ತೆ. ಇಲ್ಲಿ ಎಡಕ್ಕೆ ಮನೆಗಳು, ಬೇಕರಿ, ಒಂದೇ ಒಂದು ಮುಖ್ಯ ಸ್ಟೋರ್, ಇಲ್ಲೇ ಚೂರು ಆ ಕಡೆ ಈ ಕಡೆ ವಿಸ್ತರಿಸಲಾದ ಒಂದೆರಡು ಕಿರು ಓಣಿಗಳು, ಮೇಲಿನ ಮನೆಗಳಿಗೆ ಹೋಗಲು ಮತ್ತು ಲೇಕ್ ಬದಿ ನಿಲ್ಲಲು. ಊರಿನ ಧಾರ್ಮಿಕತೆ ಸಾರುವ ಚರ್ಚ್, ಒಂದೆರಡು ಹೋಟೆಲ್, ಸವೆನೀರ್‌ಗಳನ್ನು ಮಾರುವ ಅಲಂಕೃತ ಅಂಗಡಿಗಳು, ಇಷ್ಟೇ ಈ ಹಳ್ಳಿಯ ಉದ್ದಗಲ. ರಸ್ತೆಯ ಎಡದ ಮನೆಗಳ ಹಿಂದಕ್ಕೆ ಉದ್ದಕ್ಕೂ ಅಂಟಿಕೊಂಡೇ ಇದೆ ಆಲ್ಪ್ಸ್ ಪರ್ವತಾವಳಿಯ ಅಜೇಯ ಪರ್ವತಸಾಲು.

ಈ ರಸ್ತೆಯಿಂದ ಆರಂಭವಾದ ಮನೆಗಳ ಮೇಲಿನ ಒಂದೆರಡು ಲೆವೆಲ್‌ಗಳಲ್ಲಿ ಪರ್ವತದೆದೆಯಲ್ಲೇ ನಿರ್ಮಾಣವಾಗಿವೆ ಆಕರ್ಷಣೀಯ ವಿನ್ಯಾಸದ ಇನ್ನೊಂದಷ್ಟು ಕಟ್ಟಡಗಳು. ಚಿತ್ರಿಸಿಟ್ಟಂತಿರುವ ಕಟ್ಟಡಗಳನ್ನು ಹೊಂದಿದ ಈ ರಸ್ತೆ ನೆಲಕ್ಕೆ ಹಾಸಿರೋದು ಕಾಂಕ್ರೀಟ್ ಅಲ್ಲ, 'ಕಾಬಲ್‌ಸ್ಟೋನ್' ಎಂಬ ಮೆಡಿವಲ್ ಯೂರೋಪ್ ಕಾಲದ ಪುಟ್ಟ ಪುಟ್ಟ ಕಲ್ಲಿನ ಟೈಲ್ಸ್‌ಗಳು.

ರಸ್ತೆಯ ಬಲಬದಿ ಕೆಳಭಾಗದಲ್ಲೇ ಮಂದಗಮನೆಯಾಗಿ ಹರಿಯುತ್ತಿದೆ ಹಳ್ಳಿಯ ಜೀವನಾಡಿ 'ಹಾಲ್‌ಸ್ಟಾಟರ್ ಸೀ' ಎಂಬ ಸುಂದರ ನೀಲವರ್ಣದ ಲೇಕ್. ಇವುಗಳಂದ ನೋಡುತ್ತಾ ಮಾತು ಮರೆತು, ಕಣ್ಣು ಅಲ್ಲಿಲ್ಲಿ ಹೂತು, ಒಮ್ಮೆ ಮನೆ–ಕಟ್ಟಡ–ಪರ್ವತ, ಇನ್ನೊಮ್ಮೆ ಸರೋವರ, ಅದರಲ್ಲಾಡುವ ಹಂಸ, ನಾವೆಗಳು, ಅದರಾಚೆಯ ಹಸುರು ಪರ್ವತಸಾಲು ಅದಕ್ಕಿಂತ ಇದು, ಇದಕ್ಕಿಂತ